# ಮೂಲಾಂಶಗಳು

| | |
|---|---|
| ಪದವಿ | ಬಿ.ಎ. |
| ವಿಷಯ | ಕನ್ನಡ ಐಚ್ಛಿಕ |
| ಚಾತುರ್ಮಾಸ | III |
| ವಿಶ್ವವಿದ್ಯಾಲಯ | ಕುವೆಂಪು ವಿಶ್ವವಿದ್ಯಾಲಯ |
| ಸೆಷನ್ | 3 |

# ಸೊಲ್ಲರಿಮೆ ಸಾಹಿತ್ಯ ಸಂಸ್ಕೃತಿಗಳ ನಡುವಿನ ಸಂಬಂಧದ ಪರಿಚಯ

ಸೊಲ್ಲರಿಮೆಗೂ ನಮ್ಮ ಸಾಹಿತ್ಯ ಪರ್ಯಕ್ಕೂ ಇರುವ ಸಂಬಂಧವನ್ನು ಕುರಿತು ಗಮನಿಸಬಹುದು.

- ಕಾವ್ಯ ಭಾಷೆ ರೂಪಗೊಳ್ಳುವುದೇ ಸೊಲ್ಲರಿಮೆ ನಿಯಮ ವ್ಯತ್ಯಯದಿಂದ ಇದನ್ನು ಕೆ.ವಿ.ನಾರಾಯಣ ಅವರು ತಮ್ಮ 'ತೊಂಡುಮೇವು'ಕಂತೆಯ ಪುಸ್ತಕದಲ್ಲಿ ಗುರುತಿಸುತ್ತಾರೆ.
- ಯಾವ ಎರಡು ನಾಮಪದಗಳನ್ನು ಒಟ್ಟಿಗೆ ಸೇರಿಸಿ ಕವಿಯಾದವನು ಉಕ್ತಿ ವೈಚಿತ್ರ್ಯವನ್ನು ಸಾಧಿಸಬಲ್ಲ ಎನ್ನುವುದು ಕವಿಯ ಸೊಲ್ಲರಿಮೆಯ ತಿಳಿವಳಿಕೆಯನ್ನು ಅವಲಂಬಿಸಿದೆ.

ಕೆ.ವಿ.ನಾರಾಯಣರವರು ಕೊಡುವ ಉದಾಹರಣೆಗಳು.

೧.ಯಾವ ಮೋಹನ ಮುರಳಿ ಕರೆಯಿತು ದೂರ ತೀರಕೆ ನಿನ್ನನು (ಗೋಪಾಲಕೃಷ್ಣ ಅಡಿಗ)

೨.ಕೆಂಪಾಂಬುಧಿಯ ದಡದ ಸುಡು ನೆಲವ ದಾಟಿ ಕತ್ತಲ್ಲಲ್ಲಿ ಕದ್ದು ಬರುತ್ತಿದೆ ರಾಗ ಸಲಗ(ಕೆ.ಎಸ್.ನರಸಿಂಹಸ್ವಾಮಿ)

ಇವೆರಡೂ ದಿನನಿತ್ಯದ ಮಾತುಗಳಲ್ಲ. ನಿತ್ಯದ(ಸಾಮಾನ್ಯ)ಮಾತಿನ ವಾಕ್ಯನಿಯಮದಂತೆ ಹೇಳುವುದಾದರೆ, 'ಯಾವ ಮೋಹನ ಮುರಳಿ ನಿನ್ನನು ದೂರ ತೀರಕ್ಕೆ ಕರೆಯಿತು?'ಎಂದಾಗಬೇಕು.ನಿನ್ನನ್ನು , ತೀರಕ್ಕೆ ಪದಗಳು ವಿಭಕ್ತಿ ನಿಯಮದಂತೆ ಅನ್ವಯಗೊಳ್ಳಬೇಕು.ಕರೆಯಿತು ಕ್ರಿಯಾಪದ ಕೊನೆಯಲ್ಲಿ ಬರಬೇಕು.ಆದರೆ ಕವಿ ಈ ನಿಯಮವನ್ನು ಬದಲಿಸಿದ್ದರಿಂದಲೇ ಇದರ ನಾದ ಸೌಂದರ್ಯ ಬದಲಾಗಿದೆ.

- ಸೊಲ್ಲರಿಮೆಯ ಸ್ಥಿರ ರಚನೆಗಳನ್ನು ಬದಲಿಸದೆ ಪದರಚನೆಯ ಸ್ಥಾನವನ್ನು ಕವಿ ಬದಲಾಯಿಸುತ್ತಾನೆ.ಅಷ್ಟಕ್ಕೆ ಈ ವಾಕ್ಯದ ಅರ್ಥವೇ ಬೇರೆಯಾಗಿದೆ.ಈ ಬದಲಾವಣೆಯ ಕಾರಣ ಕವಿಯಾಗ ಬಯಸುವವನಿಗೆ ಅರ್ಥವಾದರೆ ಅವನು ಇಂತಹ ಉಕ್ತಿ ವೈಚಿತ್ರ್ಯಗಳನ್ನು ಸೃಷ್ಟಿಸಬಲ್ಲ.

- ಅದೇರೀತಿ ಎರಡನೇ ವಾಕ್ಯದಲ್ಲಿ 'ಸುಡು ನೆಲ', 'ರಾಗ ಸಲಗ' ದಂತಹ ನುಡಿಗಟ್ಟುಗಳು ಕವಿತೆಯಲ್ಲಿ ಮಾತ್ರ ವಿಶೇಷ ಅರ್ಥ ಪಡೆಯಬಲ್ಲವು.ಹೀಗೆ ಸಂಯೋಜಿಸಲು 'ಸಮಾಸ' ಪ್ರಜ್ಞೆ ಬೇಕು.

- ಹಾಗೆಯೇ ಕುವೆಂಪು ಅವರ'ಹೋಗುವೆನು ನಾ'ಕವಿತೆಯಲ್ಲಿಯೂ 'ಹೋಗುವೆನು ನಾ..ಮಲೆಯ ನಾಡಿಗೆ'ಎಂದಿದೆ.'ನಾನು ಮಲೆನಾಡಿಗೆ ಹೋಗುವೆನು'-ಎಂಬುದು ಜನಸಾಮಾನ್ಯರ ಪ್ರಯೋಗ.ಇದನ್ನು ಕವಿ ಪ್ರತ್ಯಯ ಸಮೇತ ಬದಲಾಯಿಸುತ್ತಾರೆ.ಆಗ ಅದು ಕವಿತೆಯಾಗುವ ಗುಣ ಪಡೆಯುತ್ತದೆ.

- ಇಂದು ನಮ್ಮ ಪಠ್ಯಕ್ರಮದಲ್ಲೂ ಸೊಲ್ಲರಿಮೆಯನ್ನು ಒಂದು ಶಾಸ್ತ್ರ, ಸಿದ್ಧಾಂತವಾಗಿ ಪ್ರತ್ಯೇಕವಾಗಿ ಕಲಿಯುತ್ತೇವೆ ಹೊರತು ಅದನ್ನು ಸಾಹಿತ್ಯ ಪಠ್ಯದ ಮೂಲಕ ಕಲಿಯುತ್ತಿಲ್ಲ.ಹಾಗಾಗಿ ನಮಗೆ ವ್ಯಾಕರಣ ಕಷ್ಟ.